**1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್ ಸಿ ನಂಃ- 46/2015**

(ಪ್ರಾ.ಸಾ. 20 ಚಾ.ಸಾ.-20)

ತಾಃ 18.03.2019 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

ಸಾಕ್ಷಿದಾರರ ಹೆಸರು : ಬಿ.ವೀರಭದ್ರಪ್ಪ

ತಂದೆಯ ಹೆಸರು : ಲೇಟ್ ಬಿ ಲಿಂಗಪ್ಪ
ವಯಸ್ಸು : 55 ವರ್ಷ
ಉದ್ಯೋಗ : ಹೆಚ್ ಸಿ 455, ದೊಡ್ಡಬಳ್ಳಾಪುರ ನಗರ ಪೋಲೀಸ್ ಠಾಣೆ
ವಾಸ ಸ್ಥಳ : ದೊಡ್ಡಬಳ್ಳಾಪುರ

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

ನಾನು ಜುಲೈ 2011 ರಿಂದ ಡಿಸೆಂಬರ್ 2015ರವರೆಗೆ ರವರೆಗೆ ದಾಬಾಸ್‌ಪೇಟೆ ಪೋಲೀಸ್ ಠಾಣೆಯಲ್ಲಿ ಪಿಸಿ (ಬಕಲ್ ನಂ.-750) ಆಗಿ ಕೆಲಸ ಮಾಡಿದ್ದೇನೆ.

ದಿನಾಂಕ 13.02.2014 ರಂದು ಸಿ ಪಿ ಐ ನೆಲಮಂಗಲ ಇವರು ದಾಬಾಸ್‌ಪೇಟೆ ಕ್ರೈಂ ನಂ. 36/2014ರಲ್ಲಿ ಮೃತಪಟ್ಟಿದ್ದ ಲಾರಿ ಡ್ರೈವರ್ ಮೊಹಮದ್ ಇಸಾಕ್ ಈತನ ಶವದ ಉಸ್ತುವಾರಿಗಾಗಿ ತುಮಕೂರು ಜಿಲ್ಲಾ ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದರು. ಆ ಪ್ರಕಾರ ನಾನು ಉಸ್ತುವಾರಿಯಲ್ಲಿ ಇದ್ದೆನು. ಆ ಕಾಲಕ್ಕೆ ಸಿ ಪಿ ಐ ನೆಲಮಂಗಲ ಇವರು ಸದರಿ ಆಸ್ಪತ್ರೆಗೆ ಬಂದು ಶವಾಗಾರದಲ್ಲಿದ್ದ ಶವ ಕುರಿತು ಶವ ತನಿಖೆಯನ್ನು ಮದ್ಯಾಹ್ನ 12.30 ರಿಂದ 3 ಗಂಟೆವರೆಗೆ ನಡೆಸಿದರು. ತದ ನಂತರ ಫಾರಂ ನಂ. 146 (1) ಮತ್ತು (2) ಕೊಟ್ಟು ವೈದ್ಯರಿಂದ ಶವದ ಮರಣೋತ್ತರ ಪರೀಕ್ಷೆ ಮಾಡಿಸಿ ತದ ನಂತರ ಶವವನ್ನು ವಾರಸುದಾರರಿಗೆ ನೀಡಿ ಸ್ವೀಕೃತಿ ಪಡೆದುಕೊಳ್ಳಲು ಸೂಚಿಸಿದ್ದರು. ಆ ಪ್ರಕಾರ ನಾನು ಡಾ.ರುದ್ರಮೂರ್ತಿ ಇವರಿಗೆ 146 (1) ಮತ್ತು (2) ಇವುಗಳನ್ನು ಕೊಟ್ಟು ಮರಣೋತ್ತರ ಪರೀಕ್ಷೆ ಮಾಡಿಸಿ ನಂತರ ಶವವನ್ನು ಮೃತನ ಸಂಬಂಧಿಕರಾದ ಅಯೂಬ್ ಖಾನ್ ರವರಿಗೆ ಕೊಟ್ಟು ಸ್ವೀಕೃತಿ ಪತ್ರ ಪಡೆದುಕೊಂಡು ಸಿ ಪಿ ಐ ರವರಿಗೆ ಒಪ್ಪಿಸಿ ಈ ಸಂಬಂಧದಲ್ಲಿ ನನ್ನ ಹೇಳಿಕೆ ನೀಡಿದೆನು.

ಈಗ ನನಗೆ ತೋರಿಸುತ್ತಿರುವ ಕಡತದಲ್ಲಿ ನಿಪಿ - 2 , 3 ಮತ್ತು 4 ಫೋಟೋಗಳನ್ನು ನೋಡುತ್ತಿದ್ದೇನೆ. ಸದರಿ ಫೋಟೋಗಳಲ್ಲಿದ್ದ ಶವದ ಉಸ್ತುವಾರಿ ಮಾಡಿದ್ದೆನು.

**ಪಾಟೀ ಸವಾಲುಃ 1, 4, 5 ಆರೋಪಿತರ ಪರ ಜಿ ಎಸ್ ಬಿ ವಕೀಲರಿಂದ ಃ**

ನನಗೆ ಮೌಖಿಕವಾಗಿ ಆದೇಶಿಸಿದ್ದರು. ನಾನು ನನ್ನ ಸಾಕ್ಷ್ಯದ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಶವದ ಉಸ್ತುವಾರಿಗೆ ನನ್ನನ್ನು ನೇಮಿಸಿರಲಿಲ್ಲ ಎಂದರೆ ಸರಿಯಲ್ಲ.

ಶವ ಮಹಜರ್‌ಗೆ ನನ್ನ ಸಹಿ ಇರುವುದಿಲ್ಲ. ಈ ಪ್ರಕರಣದ ಕುರಿತು ನನಗೇನೂ ಗೊತ್ತಿರದಿದ್ದರೂ ಸಹ ಮೇಲಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು 2ನೇ ಆರೋಪಿ ಪರ ಶ್ರೀ ಏ ಏ ಎಸ್ ವಕೀಲರಿಂದ ಃ-**

ನನ್ನ ಸಮಕ್ಷಮ ನಿಪಿ- 2, 3 ಮತ್ತು 4 ಫೋಟೋಗಳನ್ನು ತೆಗೆದಿರುವುದೇ ಇಲ್ಲ ಎಂದರೆ ಸರಿಯಲ್ಲ. ಮೃತ ವ್ಯಕ್ತಿಯ ಹೆಸರು ಮೊಹಮದ್ ಇಸಾಕ್ ಎನ್ನುವುದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ಮೃತನ ಸಂಬಂಧಿಕ ಅಯೂಬ್ ಖಾನ್ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

(1, 4, 5 ಆರೋಪಿತರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳುತ್ತಾರೆ.)

**ಪಾಟೀ ಸವಾಲು 6ನೇ ಆರೋಪಿ ಪರ ಶ್ರೀ ಎಸ್ ವೈ ವಕೀಲರಿಂದಃ-**

(6ನೇ ಆರೋಪಿ ಪರ ವಕೀಲರು ಪುಕಾರಿಸಲಾಗಿ ಹಾಜರಿಲ್ಲದ ಕಾರಣ ಹಾಗೂ 6ನೇ ಆರೋಪಿಗೆ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಗಿ 1, 4 ಮತ್ತು 5ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲಿನಂತೆಯೇ ತನ್ನ ಪಾಟೀ ಸವಾಲು ಇದೆ ಎಂದು ಪರಿಗಣಿಸಲು ಕೋರಿ ಕೊಂಡಿರುತ್ತಾರೆ.)

{ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.}

ಓ ಹೇ ಸಾ ಸ ಸಹಿ ಮಾಡಿದ್ದಾರೆ.

1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.